ಆ) ಹಾಗಿದ್ದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯವರು ಈ ಪ್ರದೇಶದ ಸುಧಾರಣೆಗಾಗಿ ಈ ವರ್ಷದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):- ಹೌದು, ಬಾದಾಮಿ ಪಟ್ಟಣದಲ್ಲಿ 10 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದೆ. ಈ ಕೊಳಚೆ ಪ್ರದೇಶಗಳನ್ನು ಕರ್ನಾಟಕ ಕೊಳಚೆ ಪ್ರದೇಶದ ಅಭಿವೃದ್ಧಿ ಮತ್ತು ಕೊಳಚೆ ನಿರ್ಮೂಲನೆ ಕಾಯಿದೆಯನ್ವಯ ಘೋಷಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಘೋಷಣೆ ನಂತರ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ವಿಷಯ:- ಬಾದಾಮಿ ತಾಲ್ಲೂಕಿನಲ್ಲಿರುವ ಸವಳು-ಜವಳು ಭೂಮಿಯ ವಿಸ್ತೀರ್ಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 6(10)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬಾದಾಮಿ ತಾಲ್ಲೂಕಿನಲ್ಲಿರುವ ಒಟ್ಟು ಸವಳು ಜೌಗು ಭೂಮಿಯ ವಿಸ್ತೀರ್ಣವೆಷ್ಟು? ಹಾಗೂ ಎಷ್ಟು ವರ್ಷಗಳಿಂದ ಎಷ್ಟು ಗ್ರಾಮಗಳಿಗೆ ವಿಸ್ತರಿಸಿದೆ (ಪ್ರತಿ ಗ್ರಾಮಗಳ ವಿವರ ನೀಡುವುದು)

2. ಸವಳು-ಜವಳು ಜಮೀನು ಸುಧಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):- ಬಾದಾಮಿ ತಾಲ್ಲೂಕಿನಲ್ಲಿ 1588 ಹೆಕ್ಟೆರ್ ಪ್ರದೇಶವು ಸವಳು ಮತ್ತು ಜವಳಿನಿಂದ ಹಾನಿಗೊಳಗಾಗಿರುತ್ತದೆ, ಗ್ರಾಮವಾರು ಆಂಕಿ-ಅಂಶವನ್ನು ಲಗತ್ತಿಸಿದೆ.

ಜೌಳು ಮತ್ತು ಜೌಗು ಜಮೀನುಗಳಲ್ಲಿ ಬಿಸಿಗಾಲುವೆಗಳನ್ನು ನಿರ್ಮಿಸಿ ಮಣ್ಣಿನಲ್ಲಿ ಶೇಖರವಾಗಿರುವ ಲವಣಾಂಶಗಳನ್ನು ಹೊರಹಾಕಿ ಭೂಮಿಯನ್ನು ಅಭಿವೃದ್ಧಿ ಪಡಿಸಲು ತಾಂತ್ರಿಕತೆ ಲಭ್ಯವಿದೆ. ಈ ಬಗ್ಗೆ ಕೃಷಿ ಇಲಾಖೆಯು ರೈತರಿಗೆ ತಾಂತ್ರಿಕ ಸಲಹೆಗಳನ್ನು ಈ ಭೂಮಿ ಅಭಿವೃದ್ಧಿಗೆ ನೀಡುತ್ತದೆ.

ಚುಕ್ಕೆ ಗುರುತಿನಲ್ಲದ ಪ್ರಶ್ನೆ ಸಂಖ್ಯೆ: 7(112)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುವಿಟಕಲ್):- ಭಾರಿ ಮಳೆಯಿಂದಾದ ಹಾನಿಯ ಬಗ್ಗೆ, ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜೂನ್ 16, 17, 18-1996ರ ರಂದು ಬಿದ್ದಂತಹ ಭಾರಿ ಮಳೆಯಿಂದ ಆದ ಹಾನಿಯೆಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ಈ ಹಾನಿಯಿಂದ ಜನ-ಜಾನುವಾರು ಬೆಳೆ ಹಾಗೂ ಸಾರ್ವಜನಿಕ ಆಸ್ತಿ-ಪಾಸ್ತಿಗಳಿಗೆ ಆಗಿರುವಂತಹ ನಷ್ಟ ಎಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಇ) ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಬಿಡುಗಡೆ ಮಾಡಿರುವ ಹಣ ಎಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಈ) ಈ ಬಾಬ್ತಿಗಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಹಣ ಎಷ್ಟು? ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಹಣ ಎಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಶ್ರೀ ರಮೇಶ್.ಸಿ.ಜಿಗಜಿಣಗಿ (ಕಂದಾಯ ಸಚಿವರು):- ಜೂನ್ ತಿಂಗಳಿನ ಮಳೆಯಿಂದಾದ ಒಟ್ಟು ಹಾನಿ ರೂ. 125 1.72 ಲಕ್ಷಗಳು (ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.

ಈ ಭಾರಿ ಮಳೆಯಿಂದ 83 ಮಂದಿ ಮೃತಪಟ್ಟು, 938 ಜಾನುವಾರುಗಳು ಸತ್ತಿವೆ. ಸುಮಾರು ಹಾನಿಗೊಂಡು ರೂ. 135.72 ಲಕ್ಷಗಳಷ್ಟು ನಷ್ಟವಾಗಿರುತ್ತದೆ. ಸಾರ್ವಜನಿಕ ಆಸ್ತಿಪಾಸ್ತಿಗಳ ಹಾನಿಯನ್ನು ರೂ. 886.30 ಲಕ್ಷಗಳೆಂದು ಅಂದಾಜಿಸಲಾಗಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ)

ಪ್ರಸಕ್ತ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿ ಯಿಂದ ರೂ. 5.50 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಅಲ್ಲದೇ, ಜಿಲ್ಲಾಧಿಕಾರಿಗಳ ಬಳಿ ದಿನಾಂಕ 1.6.96ರಲ್ಲಿ ರೂ. 22.64 ಕೋಟಿಗಳಷ್ಟು ಹಣ ಲಭ್ಯವಿತ್ತು. (ಜಿಲ್ಲಾವಾರು ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ)

ಯಾವುದೇ ಉಪ ಶೀರ್ಷಿಕೆಯಡಿಯಲ್ಲಿ ಲಭ್ಯವಿರುವ ಹಣವನ್ನು ವರ್ಗಾಯಿಸಿಕೊಂಡಲ್ಲ, ಪ್ರವಾಹ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವಂತೆ ಸರ್ಕಾರವು ಫ್ಯಾಕ್ಸ್ ಸಂದೇಶ ಸಂಖ್ಯೆ ಆರಡಿ 95 ಟಿಎನ್‌ಆರ್ 96, ದಿನಾಂಕ 17.6.96ರಲ್ಲಿ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚಿಸಿದೆ.

ಪ್ರಸಕ್ತ ಸಾಲಿಗೆ 'ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ರೂ. 41.85 ಕೋಟಿಗಳ ಅನುಸೂಚವನ್ನು ನಿಗಧಿ ಪಡಿಸಲಾಗಿದೆ.

ರಾಜ್ಯ ಸರ್ಕಾರವು ಬಿಡುಗಡೆ ಮಾಡಿದ ಹಣ ರೂ. 5.50 ಕೋಟಿಗಳು (ಜಿಲ್ಲಾವಾರು ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ). ಆದ್ಯತೆ ಪರಿಗಣಿಸಿ ಹಣ ಬಿಡುಗಡೆ ಮಾಡಲಾಗುವುದು.

ಶ್ರೀ ರಮೇಶ ಸಿ. ಜಿಗಜಿಣಗಿ

(ಕಂದಾಯ ಸಚಿವರು).

ವಿಷಯ:- ಕುಣಿಗಲ್‌ನಲ್ಲಿ ಆಶ್ರಯ ಯೋಜನೆ ಸ್ಥಗಿತ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 8 (83)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್):

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

1. ಆಶ್ರಯ ಯೋಜನೆ ಅಡಿಯಲ್ಲಿ ನಿವೇಶಗಳನ್ನು ರೂಪಿಸುವ ಕಾರ್ಯಕ್ರಮ ರಾಜ್ಯದಲ್ಲಿ ಸಾಮಾನ್ಯವಾಗಿ ವಿಶೇಷವಾಗಿ ಕುಣಿಗಲ್ ಜಿಲ್ಲೆಯಲ್ಲಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಇಲ್ಲ. ನಿವೇಶನಗಳನ್ನು ರೂಪಿಸಲು ಕ್ರಮ ಕೈಗೊಳ್ಳಲಾಗಿದೆ. ಕುಣಿಗಲ್ ತಾಲ್ಲೂಕಿನ 314 ಗ್ರಾಮಗಳಲ್ಲಿ 4769 ಬಡ ನಿವೇಶನ ರಹಿತರಿರುತ್ತಾರೆ. 200 ಗ್ರಾಮಗಳಲ್ಲಿ ಒಟ್ಟು 3626 ನಿವೇಶಗಳನ್ನು ರೂಪಿಸಲು ಈವರೆಗೆ 181-13 ಎಕರೆ ಸರ್ಕಾರಿ ಹಾಗೂ ಗ್ರಾಮಠಾಣ ಜಮೀನನ್ನು ಗುರುತಿಸಲಾಗಿದೆ. ನಿವೇಶನಗಳನ್ನಾಗಿ ರೂಪಿಸಲು ಸದರಿ ಜಮೀನನ್ನು ಜಿಲ್ಲಾ ಪಂಚಾಯ್ತಿ ಸ್ವಾಧೀನಕ್ಕೆ ವಹಿಸಲಾಗಿದೆ. ನಿವೇಶನಗಳನ್ನು ರೂಪಿಸುವ ಕಾರ್ಯ 114 ಗ್ರಾಮಗಳಲ್ಲಿ ಪ್ರಗತಿಯಲ್ಲಿದೆ. 4 ಗ್ರಾಮಗಳಲ್ಲಿ ಜನಮಾನನ್ನು ಸ್ವಾಧೀನಕ್ಕೆ ಕ್ರಮ ಕೈಗೊಳ್ಳಬೇಕಾಗಿದೆ.

ಅ) ಹಾಗಾದರೆ, ಈ ನಿಟ್ಟಿನಲ್ಲಿ ಕ್ರಾರ ಕೈಗೊಂಡ ಕ್ರಮಗಳೇನು ? : ನಿವೇಶನಗಳನ್ನು ರೂಪಿಸಲು ಕ್ರಮಕೈಗೊಳ್ಳಲಾಗಿದೆ. ಕುಣಿಗಲ್ ತಾಲ್ಲೂಕಿನ 314 ಗ್ರಾಮಗಳಲ್ಲಿ 4769 ಬಡ ನಿವೇಶನ ರಹಿತರಿರುತ್ತಾರೆ. 200 ಗ್ರಾಮಗಳಲ್ಲಿ ಒಟ್ಟು 3626 ನಿವೇಶನಗಳನ್ನು ರೂಪಿಸಲು ಈವರೆಗೆ 181 ಎಕರೆ